# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆಃ 69/2024

**ಸಾಕ್ಷಿಯನ್ನು ದಿಃ 08.07.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಕಾಂತರಾಜು | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 2 |
| ತಂದೆಯ ಹೆಸರು | ಬಿ.ಎಲ್ ಚಂದ್ರಶೇಖರಯ್ಯ | | |
| ವಯಸ್ಸು | 49 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಬೀಜಗನಹಳ್ಳಿ | | |

## <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಚಾಸಾ–1, 3 ರಿಂದ 8 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಸಾಕ್ಷಿ ನಿಪಿ–2ರ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2 ವರ್ಷಗಳ ಹಿಂದೆ ಘಟನಾ ಸ್ಥಳವಾದ ಚಾಸಾ–1 ರವರ ಜಮೀನಿನ ಹತ್ತಿರ ಗಲಾಟೆಯಾದ ಸ್ಥಳದಲ್ಲಿ ಹಾಕಿದ್ದೇನೆ. ಅಲ್ಲಿ ಪೋಲಿಸರು ಮಹಜರು ಮಾಡಲು ಬಂದಿದ್ದರು. ಚಾಸಾ–1 ರವರು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ್ದಾರೆ. ನನ್ನ ಜೊತೆ ಚಾಸಾ–3 ರವರು ಇದ್ದರು. ಸದರಿ ಮಹಜರನ್ನು ಪೋಲಿಸರು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಮಾಡಿದರು. ಮಹಜರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## <u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>

ದಿಃ 22.11.2023 ರಂದು ಪೋಲಿಸರು ಮಧ್ಯಾಹ್ನ 2.00ರ ಸಮಯದಲ್ಲಿ ಚಾಸಾ–1 ರವರಿಗೆ ಸೇರಿದ ಬೀಜನಗಹಳ್ಳಿ ಗ್ರಾಮದ ಸರ್ವೆ ನಂ. 87/13ರ ಜಮೀನಿನಲ್ಲಿ ಗಲಾಟೆಯ

ಸಂಬಂಧ ಸ್ಥಳಮಹಜರು ಮಾಡಲು ಬಂದಿದ್ದು, ಆ ಸಮಯದಲ್ಲಿ ಚಾಸಾ-1 ರವರು ಘಟನಾ ಸ್ಥಳವನ್ನು ತೋರಿಸಿದ್ದು, ಆಗ ನನ್ನನ್ನು ಮತ್ತು ಚಾಸಾ-3 ರವರನ್ನು ಸಾಕ್ಷಿದಾರರಾಗಿ ಪೋಲಿಸರು ಬರಮಾಡಿಕೊಂಡರು ಎಂದರೆ ಸರಿ. ನಂತರ ಪೋಲಿಸರು ಮಹಜರು ಮಾಡಿ ಅದನ್ನು ಓದಿ ಹೇಳಿದ ಮೇರೆಗೆ ನಂತರ ನಾನು ಸಹಿ ಹಾಕಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. RKS ವಕೀಲರಿಂದಃ**

ನನಗೆ ಚಾಸಾ-1 ರವರು ಸುಮಾರು 15 ವರ್ಷಗಳಿಂದ ಪರಿಚಯ. ಮಹಜರಿಗೆ ಬರುವಂತೆ ಪೋಲಿಸರು ನನಗೆ ನೋಟಿಸ್ ಕೊಟ್ಟಿದ್ದರು. ನಿಪಿ-2(ಬಿ) ಸಹಿಯನ್ನು ನಾನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.